ಮದ್ರಾಸ್ ಏರಿಯಾದವರ ಬಗ್ಗೆ ಕೋರ್ಟಿನಲ್ಲಿ ಸ್ಟೇ ಇದೆ ಎಂತಲೂ ಹೇಳಿದ್ದೀರಿ, ನೀವು ಈ ರೀತಿ ಹೇಳಿದರೆ ಅವರಿಗೆ ಪುಷ್ಟಿಯನ್ನು ಕೊಟ್ಟ ಹಾಗೆ ಆಗುತ್ತದೆ. ಇದು ಕೋಟ್ಯಾಂತರ ರೂಪಾಯಿ ವ್ಯವಹಾರ. ಕೋಟ್ಯಾಂತರ ರೂಪಾಯಿಯ ಕ್ವಾರಿಯನ್ನು ಅವರು ಆರಾಮವಾಗಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಅವರಿಗೆ ಹೇಳುವವರು ಮತ್ತು ಕೇಳುವವರೂ ಯಾರೂ ಇಲ್ಲ. ನೀವು ಡಿ.ಸಿ. ಅವರಿಗೆ ಲೆಟರ್‌ನ್ನು ಬರೆದಿದ್ದರೆ they do not care the DCs. ಇದರ ಬಗ್ಗೆ ಬೇಕು ಅಥವಾ ಬೇಡ ಎಂದು ಅರ್ಧ ರಾಜಿ ಮಾಡಿಕೊಳ್ಳುವ ರೀತಿಯಲ್ಲಿ ಮಾತನಾಡಿದರೆ ಆಗುವುದಿಲ್ಲ Basically you have no will power at all. you say that this is your stand that you are not going to allow anybody to quarry colour granite, which is a costly material. If you have guts to say it, you say it.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಸರ್ಕಾರದ ಗಟ್ಸ್ ಬಗ್ಗೆ ಪ್ರಶ್ನೆ ಮಾಡತಕ್ಕಂಥ ಮಾತು ಬೇಡ.

ಶ್ರೀ ಯು. ಭೂಪತಿ.—ಸರ್ಕಾರ ನಿಮ್ಮ ಕೈಯಲ್ಲಿದೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾವ ಮುಚ್ಚುಮರೆಯನ್ನೂ ನಾವು ಮಾಡಿಲ್ಲ. ನಾವು ಯಾರ ಜೊತೆಯಲ್ಲಿಯೂ ಸಹಾ ಕೂಡಿಕೊಂಡಿಲ್ಲ. ಇದರ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಎಷ್ಟು ಬೇಗ ಇದನ್ನು ಸಂಪೂರ್ಣವಾಗಿ ತಡೆಯಲಿಕ್ಕೆ ಏನೇನು ಕಾಯ್ದೆಯಲ್ಲಿ ತಿದ್ದುಪಡಿಗಳನ್ನು ಮಾಡಬೇಕೋ ಅದನ್ನು, ನಾವು ಮಾಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ತಿದ್ದುಪಡಿಗಾಗಿ ಇದನ್ನು ಲಾ ಡಿಪಾರ್ಟ್‌ಮೆಂಟ್ ಮತ್ತು ಆರ್ಥಿಕ ಇಲಾಖೆಯವರಿಗೂ ಕೂಡಾ ಕಳುಹಿಸಿದ್ದೇನೆ. ಇದರ ಬಗ್ಗೆ ಅಮೆಂಡ್‌ಮೆಂಟ್ ಆದತಕ್ಷಣ ಇನ್ನೊಂದು ವಾರವೋ ಅಥವಾ ಇನ್ನು ೧೫–೨೦ ದಿವಸಗಳಲ್ಲಿ ಇದರ ಬಗ್ಗೆ ಅಮೆಂಡ್‌ಮೆಂಟನ್ನು ಮಾಡಿ ಈಗ ಏನು ಇಲ್ಲೀಗಲ್ ಕ್ವಾರಿಯನ್ನು ತೆಗೆಯುತ್ತಿದ್ದಾರೆ, ಅದನ್ನು ಸಂಪೂರ್ಣವಾಗಿ ತಡೆಗಟ್ಟುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ, ಅದೇನೆಂದರೆ ಎಷ್ಟು ಕ್ವಾರಿಯನ್ನು ಎಕ್ಸ್‌ಪೋರ್ಟ್ ಮಾಡಿದ್ದಾರೆ ಎಂದು ಕೇಳಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಅಂಕಿ ಸಂಖ್ಯೆ ಇಲ್ಲ. ಮಾನ್ಯ ಸದಸ್ಯರು ಬೇಕಾದರೆ ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಲಿ, ಅದಕ್ಕೆ ಸರಿಯಾದ ಉತ್ತರವನ್ನು ತರಿಸಿಕೊಡುತ್ತೇನೆ.

ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ನಿವೇಶನ ಹಂಚಿಕೆ ಬಗ್ಗೆ

೧೫೬.(೬೫೧) ಶ್ರೀ ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಸಣ್ಣ ಕೈಗಾರಿಕೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ನೇಕಾರರಿಗೆ ನಿವೇಶನ ಹಂಚುವುದಕ್ಕಾಗಿ ಜಮೀನು ವಶಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಕೊಂಡಿದ್ದುದು ನಿಜವಲ್ಲವೆ?

(ಆ) ಹಾಗಿದ್ದಲ್ಲಿ, ವಶಪಡಿಸಿಕೊಳ್ಳಲಾದ ಜಮೀನಿನ ಮಾಲೀಕರಿಗೆ ಹಣ ಪಾವತಿ ಮಾಡಲಾಗಿದೆಯೆ?

(ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

(ಈ) ಡಚ್ ಯೋಜನೆಯಡಿಯಲ್ಲಿ ಸದರಿ ನೇಕಾರರಿಗೆ ಮನೆಗಳನ್ನು ನಿರ್ಮಿಸಲಾಗಿದೆಯೆ?

(ಉ) ಹಾಗಿದ್ದಲ್ಲಿ, ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಹಾಗೂ ಹಂಚಲಾಗಿದೆ?

(ಊ) ಹಾಗಿಲ್ಲದಿದ್ದಲ್ಲಿ, ಕೂಡಲೆ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ನೇಕಾರರಿಗೆ ನಿವೇಶನ ನೀಡುವ ಸಲುವಾಗಿ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದ ಸರ್ವೆ ನಂ. ೪, ೫ ಮತ್ತು ೬ ರಲ್ಲಿ ಒಟ್ಟು ೬ ಎಕರೆ ೩೫ ಗುಂಟೆ ಭೂಮಿಯನ್ನು ಗುರುತಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯವರನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಕೋರಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿಯು ಭೂಮಿಯನ್ನು ತನ್ನ ನಿಯಮಾವಳಿಗನುಸಾರವಾಗಿ ಸ್ವಾಧೀನ ಪಡಿಸಿಕೊಳ್ಳುವುದು.

(ಅ) ಮತ್ತು (ಇ) ೧೯೬೬ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿ ಕಾಯ್ದೆ ಕಲಂ ೨೮(೪) ರ ಅನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಮಾಲೀಕರಿಗೆ ಪರಿಹಾರ ಧನವನ್ನು ಮಂಜೂರು ಮಾಡಲಾಗುವುದು.

(ಈ) ಇಲ್ಲ.

(ಉ) ಉದ್ಭವಿಸುವುದಿಲ್ಲ.

(ಊ) ಶಹಾಪುರದಲ್ಲಿ ವಾಸ ಹಾಗೂ ಕಾರ್ಯಗಾರ ಷೆಡ್ಡುಗಳನ್ನು ನಿರ್ಮಿಸುವ ಯೋಜನೆ ಡಚ್ ಸ್ಕೀಮಿನ ೨ನೇ ಹಂತದಲ್ಲಿ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಶ್ರೀ ಶಿವಶೇಖರ ಗೌಡ ಶಿರವಾಳ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಹೇಳಿದಂತೆ ಗೋಗಿ ಗ್ರಾಮದ ಸರ್ವೆ ನಂ. ೪, ೫ ಮತ್ತು ೬ ರಲ್ಲಿ ಒಟ್ಟು ೬ ಎಕರೆ ೩೩ ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೋರಲಾಗಿರುತ್ತದೆ ಎಂದು ಹೇಳಿದ್ದಾರೆ. ಇದೇ ಪ್ರಶ್ನೆಯನ್ನು ಮೂರು ನಾಲ್ಕು ಸಾರಿ ಕೇಳಿದ್ದೇನೆ. ಈ ಭೂಮಿಯನ್ನು ವಶಪಡಿಸಿಕೊಂಡ ಮೇಲೆ ಪರಿಹಾರವನ್ನು ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾಗಿ ಬರೆದಿದ್ದೇನೆ. ಈಗ ಮಾನ್ಯ ಸಚಿವರಿಗೆ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಮಾಲೀಕರಿಗೆ ಕೂಡಲೇ ಹಣವನ್ನು ಒದಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆದೂ ಅಲ್ಲದೆ ಈ ವರ್ಷ ವಿಪರೀತವಾಗಿ ಮಳೆ ಆಗಿರುವುದರಿಂದ ನೇಕಾರರುಗಳ ಹಳೆಯ ಮನೆಗಳು ಸೋರುತ್ತಿವೆ. ಇದರಿಂದ ಅವರುಗಳು ಮಾನಸಿಕತ್ಯ ಕೆಲಸಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಸಚಿವರನ್ನು ಒಂದು ವಿನಂತಿ ಮಾಡುತ್ತೇನೆ, ಈ ಭೂಮಿಯನ್ನು ವಶಪಡಿಸಿಕೊಂಡ ಮೇಲೆ, ಇವರುಗಳಿಗೆ ಚೆನ್ನಾಗಿ ಬಾಳಿಕೆ ಬರುವಂತಹ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಈಗ ಭೂಮಿಯನ್ನು ವಶಪಡಿಸಿಕೊಳ್ಳಬೇಕಾದಂತಹ ಪ್ರೊಸೀಡಿಂಗ್ಸ್ ನಡೆದಿದೆ. ಆದರೆ ಸಂಪೂರ್ಣವಾಗಿ ಭೂಮಿಯನ್ನು ವಶಪಡಿಸಿಕೊಂಡಿರುವ ಮಾಲೀಕರಿಗೆ ಪರಿಹಾರದ ವ್ಯವಸ್ಥೆ ಮಾಡಲಾಗುತ್ತದೆ. ಆದಷ್ಟು ಬೇಗ ಒಂದು ವಾರದಲ್ಲಿ ಹಣ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ. ಸಂಪೂರ್ಣವಾದ ಪ್ರೊಸೀಡಿಂಗ್ಸ್ ಇದರ ಬಗ್ಗೆ ಆಡದೆ ವ್ಯವಸ್ಥೆ ಮಾಡಬಹುದು. ಡಚ್ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಬೋರ್ಡ್‌ನಲ್ಲಿ ತೀರ್ಮಾನ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರ ಸಲಹೆ ಹಾಗೂ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಮನೆ ಕಟ್ಟಿಸಿಕೊಡುವಂತಹ ವಿಚಾರವನ್ನು ಆದಷ್ಟು ಬೇಗ ಜಾರಿ ಮಾಡಲು ಪ್ರಯತ್ನ ಮಾಡುತ್ತೇನೆ.

ಕೈಮಗ್ಗಗಳ ನೇಕಾರರಿಗೆ ನೂಲು ವಿತರಣೆ ಮಾಡುವುದು.

೧೫೭.(೬೪೭) ಶ್ರೀ ಕುಶಾಲ (ಸುಳ್ಯ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಮಗ್ಗ ನೇಕಾರರಿಗೆ ನೂಲುಗಳನ್ನು ಸಂಘಗಳ ಮೂಲಕ ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಕಾರಣವೇನು?

(ಆ) ಸದ್ರಿಯವರಿಗೆ ನೇಕಾರರ ಸಂಘಗಳ ಮೂಲಕ ಸಾಲ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಮತ್ತು ಸಹಾಯಧನ ನೀಡುವಲ್ಲಿ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಕೈಮಗ್ಗ ನೇಕಾರರಿಗೆ ಸಂಘಗಳಿಂದ ಆಗುತ್ತಿರುವ ತೊಂದರೆಗಳನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ಸರಿಯಾಗಿ ವಿತರಣೆ ಮಾಡುತ್ತಿಲ್ಲ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

(ಆ) ಇಲ್ಲ.